Discussion of a Matter for Short Duration under Rule 59
Drought conditions Prevailing in some districts of the State

ಶ್ರೀ ಎಂ.ವಿ. ರಾಜಶೇಖರನ್ (ಉತ್ತರ ಹಳ್ಳಿ).—ಸ್ವಾಮಿ, ಈ ರಾಜ್ಯದಲ್ಲಿರತಕ್ಕ ಏನು ತೀವ್ರವಾದ ಬರಗಾಲ ಪರಿಸ್ಥಿತಿ ಇದೆ ಅದನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತಾ ತಮ್ಮ ಮೂಲಕ ಸರ್ಕಾರದ ಗಮನಕ್ಕೆ ಕೆಲವೊಂದು ವಿಷಯಗಳನ್ನು ತರಬಯಸುತ್ತೇನೆ. ಸ್ವಾಮಿ, ಸರ್ಕಾರದವರ ವಾರ್ಷಿಕ ವರದಿ ೧೯೮೦–೮೧ ರಲ್ಲಿ ಕಂದಾಯ ಇಲಾಖೆಯ ವರದಿಯನ್ನು ಈ ಸದನದಲ್ಲಿ ಇಡುತ್ತಾ ಈ ಸ್ಟೇರ್ಸಿಟಿ ವಿಚಾರದಲ್ಲಿ ಏನು ಹೇಳಿದ್ದಾರೆ ಎನ್ನುವುದನ್ನು ಓದಿದ್ದೇವೆ. ಮತ್ತು ಅದಕ್ಕೆ ಮಾನ್ಯ ಕಂದಾಯ ಮಂತ್ರಿಗಳವರು ಈ ಘನ ಸಭೆಯಲ್ಲಿ ಉತ್ತರ ಕೊಡುತ್ತಾ ಏನು ಹೇಳಿದ್ದಾರೆ ಎನ್ನತಕ್ಕದನ್ನು ಕೂಡ ಓದಿದ್ದೇವೆ. ಆ ವಿಷಯಕ್ಕೆ ಆ ಮೇಲೆ ಡಿಟೇಲ್ ಆಗಿ ಬರುತ್ತೇನೆ. ೧೯೭೨ನೇ ಇಸ್ವಿಯಲ್ಲಿ ಶ್ರೀಮಾನ್ ಆರ್ಮುಗಂರವರ ನೇತೃತ್ವದಲ್ಲಿ ಆಗಿನ ಸರ್ಕಾರ ಈ ಸದನದ ಒಂದು ಸಮಿತಿಯನ್ನು ಮಾಡಿ ಬರಗಾಲ ಪೀಡಿತ ಪ್ರದೇಶದ ಬಗ್ಗೆ ಒಂದು ವರದಿಯನ್ನು ಕೊಡಬೇಕೆಂದು ಕೇಳಿದಾಗ ಆ ಸಮಿತಿಯು ಒಂದು ವರದಿಯನ್ನು ಕೆಲವೊಂದು ರೆಕಮೆಂಡೇಷನ್‌ಗಳನ್ನು ಮಾಡಿದೆ. ಆವರು ಕೊಟ್ಟಂಥ ಸಲಹೆಗಳನ್ನು ಸರ್ಕಾರ ಎಷ್ಟರಮಟ್ಟಿಗೆ ಜಾರಿಗೆ ತಂದಿದ್ದಾರೆ ಎಂಬುದನ್ನು ನಾವು ನೋಡಿದರೆ, ಸ್ವಾಮಿ ನನಗನ್ನಿಸುತ್ತದೆ, ಸರ್ಕಾರಕ್ಕೆ ಕಣ್ಣು ಇಲ್ಲ, ಕಿವಿ ಇಲ್ಲ ಬಾಯಿ ಇದೆ ಎಂದು ಅನ್ನಿಸುತ್ತದೆ. ಅದನ್ನು ಇಂಗ್ಲೀಷ್‌ನಲ್ಲಿ ಹೇಳುವುದಾದರೆ, they are deaf, they are blind, but they are not dumb. English Dictionary says, even though they are dumb, they are intelligent, but here these people are not intelligent. they are like frauds who always play crook. Now, this is the position of this Government. Why I am telling is.....

ಆ ಸಮಿತಿ ಬಹಳ ಚೆನ್ನಾಗಿ ಸಲಹೆಗಳನ್ನು ಕೊಟ್ಟಿದೆ. ಬರಗಾಲ ಪೀಡಿತ ಪ್ರದೇಶದಲ್ಲಿ ಏನೊಂದು ಸಫರಿಂಗ್ಸ್ ಇದೆ, ಅಲ್ಲಿಯ ಜನಗಳು ಹೇಗಿದ್ದಾರೆ, ಆ ಪ್ರದೇಶದ ಜನ ಇನ್ನೊಂದು ಪ್ರದೇಶಕ್ಕೆ ವಲಸೆ ಹೋಗುತ್ತಿದ್ದಾರೆ. ನೀರಾವರಿ ಸಮಸ್ಯೆ ಏನಿದೆ, ಅಲ್ಲಿಯ ಆಹಾರದ ಸಮಸ್ಯೆ ಏನಿದೆ, ಮತ್ತು ಅಲ್ಲಿಯ ದನಕರುಗಳ ಸಮಸ್ಯೆ ಏನಿದೆ, ಮತ್ತು ದನಕರುಗಳಿಗೆ ಹುಲ್ಲು ಇಲ್ಲದೆ, ಎಷ್ಟು ಕೊಂದರೆಯನ್ನು ಅನುಭವಿಸುತ್ತಿವೆ, ಅವಕ್ಕೆ ಸರ್ಕಾರದವರು ಯಾವ ಯಾವ ರಿಲೀಫ್ ಮೆಜರ್ಸ್‌ಗಳನ್ನು ತೆಗೆದುಕೊಳ್ಳಬೇಕು. ಮತ್ತೆ ಗ್ರೌಂಡ್ ವಾಟರ್‌ನ್ನು ಎಷ್ಟರಮಟ್ಟಿಗೆ ಉಪಯೋಗಿಸಿಕೊಳ್ಳಬೇಕು. ಮತ್ತೆ ಅಲ್ಲಿಗೆ ಒಂದು ಕಮಿಷನ್‌ನನ್ನು ನೇಮಕ ಮಾಡಿ ಬರಗಾಲ ಪೀಡಿತ ಪ್ರದೇಶಗಳಲ್ಲಿ ಒಂದು ಪರ್ಮನೆಂಟ್ ಮತ್ತು ಲಾಂಗ್ ಟರ್ಮ್ ಮೆಜರ್ಸ್‌ನ್ನು ಎಷ್ಟರಮಟ್ಟಿಗೆ ಮಾಡಬೇಕು ಮತ್ತು ಅಲ್ಲಿಯ ಇರಿಗೇಷನ್ ಪ್ರಾಜೆಕ್ಟ್‌ಗಳ ವಿಚಾರದಲ್ಲಿ ಯಾವ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು, ಮತ್ತೆ ಕೂಲಿ ಕೊಡತಕ್ಕದ್ದಾಲ್ಲಿ ಅವನಿಗೆ ಎಷ್ಟರ ಮಟ್ಟಿನ ಕೂಲಿ ದೊರೆಯುವಂತೆ ಮಾಡಬೇಕು ಎನ್ನತಕ್ಕ ಅಭಿಪ್ರಾಯಗಳನ್ನೆಲ್ಲಾ ಬಹಳ ಚೆನ್ನಾಗಿ ವಿಶಾಲವಾಗಿ ಆ ಒಂದು ರಿಪೋರ್ಟ್‌ನಲ್ಲಿ ಅವರು ಪ್ರಸ್ತಾಪ ಮಾಡಿದ್ದಾರೆ ಆದರೆ ಸ್ವಾಮಿ ನಮ್ಮ ಕಂದಾಯ ಮಂತ್ರಿಗಳವರು ಮೇಲ್ಮನೆಯಲ್ಲಿ ಸ್ಟೇಟ್‌ಮೆಂಟ್ ಮಾಡಿದ್ದಾರೆ, ಬರಗಾಲ ಪೀಡಿತ ಪ್ರದೇಶಗಳಲ್ಲಿ ಬಹಳ ಚೆನ್ನಾಗಿದೆ ಎಂದು ಹೇಳಿ ಅವರು ವ್ಯಾಖ್ಯಾನ ಮಾಡಿರತಕ್ಕದ್ದನ್ನು ಕೇಳಿ ಮನಸ್ಸಿಗೆ ಬಹಳ ನೋವಾಗುತ್ತಿದೆ.

(ಶ್ರೀ ಕೆ. ಭಾಸ್ಕರ ನಾಯ್ಡು ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಕೇಂದ್ರ ಸರ್ಕಾರದವರೇ ಕೊಟ್ಟಿರತಕ್ಕ ಮಾಹಿತಿಯ ಮೇರೆಗೆ ಸುಮಾರು ೧೨.೬೫ ಹಳ್ಳಿಗಳು ೧೬ ಜಿಲ್ಲೆಗಳು ೧ ಕೋಟಿ ೩೧ ಲಕ್ಷ ಜನರು ಅಭಾವ ಪೀಡಿತ ಪ್ರದೇಶಗಳಲ್ಲಿ ಕೊರಗುತ್ತಿದ್ದಾರೆ ಸಾಯುತ್ತಿದ್ದಾರೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಮತ್ತೆ ಸ್ವಾಮಿ ತಮಗೆ ಗೊತ್ತಿರುವ ಹಾಗೆ ದುರ್ದೈವದ ಸಂಗತಿ ಎಂದರೆ ಈ ರಾಜ್ಯ ಆಗಿಂದಾಗ್ಗೆ ಬರಗಾಲ ಪೀಡಿತ ರಾಜ್ಯವಾಗುತ್ತಿದೆ. ಅದಕ್ಕೆ ಕಾರಣ ಏನು ಎಂಬುವಕ್ಕೆ ಮುಂದೆ ಬರುತ್ತೇನೆ. ಆದುದರಿಂದ ಒಂದಲ್ಲ ಒಂದು ಭಾಗದಲ್ಲಿ ನಮ್ಮ ರಾಜ್ಯದಲ್ಲಿ ಪ್ರತಿ ವರ್ಷ ಬರ ಬರುತ್ತಿದೆ. ಮಳೆ ಇಲ್ಲ ಇಂಥಾ ಒಂದು ಪರಿಸ್ಥಿತಿ ಇರುವಾಗ ಸರ್ಕಾರದವರ ಜವಾಬ್ದಾರಿ ಏನು. ಸರ್ಕಾರ ಎಷ್ಟರಮಟ್ಟಿಗೆ ಈ ಒಂದು ಅಭಾವವನ್ನು ಕೊನೆಗಾಣಿಸುವುದಕ್ಕೆ ಲಾಂಗ್ ಟರ್ಮ್ ಮೆಜರ್ಸ್

ತೆಗೆದುಕೊಂಡಿದ್ದಾರೆ. ಮೀಡಿಯಂ ಮೆಜರ್ಸ್ ತೆಗೆದುಕೊಂಡಿದ್ದಾರೆ. ಶಾರ್ಟ್‌ಟರ್ಮ್ ಮೆಜರ್ಸ್ ತೆಗೆದುಕೊಂಡಿದ್ದಾರೆ ಅಂತ ಹೇಳಿ ಪರಿಶೀಲನೆ ಮಾಡುವುದಾದರೆ. ಸ್ವಾಮಿ ನಾನು ಮೊದಲೇ ಹೇಳಿದ ಹಾಗೆ ಇವರು ಕುರುಡರು ಮತ್ತು ಕಿವುಡರು ಆಗಿದ್ದಾರೆ. ಆದರೆ ದುರ್ದೈವ ಈ ಕಷ್ಟವನ್ನು ಅನುಭವಿಸತಕ್ಕ ಜನ ಏನಿದ್ದಾರೆ ಅವರೆಲ್ಲಾ ಕಡು ಬಡವರು, ನಿರ್ಗತಿಕರು ಆಗಿದ್ದಾರೆ. ಈ ಅಭಾವ ಪೀಡಿತ ಪ್ರದೇಶವೇನಿದೆ ಅಲ್ಲೆ ವಾಸ ಮಾಡತಕ್ಕವರೆಲ್ಲಾ ಕಡು ಬಡವರೇ ತಾವು ಈ ವಿಷಯವನ್ನು ಪರಿಶೀಲನೆ ಮಾಡಿದ್ದೇ ಆದರೆ ಅದನ್ನು ಜೋಗಲಾಡಿಸುವುದಕ್ಕೆ ಸರ್ಕಾರದವರು ಏನು ಮಾಡಿದ್ದಾರೆ ಸ್ವಾಮಿ, ೧೯೮೧-೮೨ನೇ ಇಸ್ವಿಯ ರಿಪೋರ್ಟ್‌ನ್ನು ಮಾನ್ಯ ಕಂದಾಯ ಮಂತ್ರಿಗಳವರು ಈ ಸಭೆಯ ಮುಂದೆ ಮಂಡಿಸುತ್ತಾ ಈ ರೀತಿಯಾಗಿ ಹೇಳಿದ್ದಾರೆ.

> " On account of failure of timely rains and irregular distribution of rainfall during the period May-October. 1980 the Districts of Bijapur, Belgaum, Dharwad. Bellary. Bidar, Gulbarga, Raichur, Kolar. Bangalore. Tumkur, Mandya, Chitradurga. Mysore, Hassan and Chickmagalur have been affected by scarcity conditions. In these Districts normal sowings have not been completed to the full extent....."

He goes on giving details. Then, he comes to the action part of the work where he states as follows:

> " Starting of relief works to provide employment to agricultural workers who have no work consequent on the scarcity conditions;

2. Arrangements for drinking water supplies in areas where difficulties are felt by:

(a) sinking of borewells with speed drinking rigs;

(b) deepening of existing wells;

(c) siuking temporary wells.

3. Ensuring adequate stocking of foodgrains in the distribution system especially in the searcity areas.

> " As at the end of March 1981 a total sum of Rs. 1097. 042 lakhs both under '289 Relief' and 'New Plan Heads' have been allotted to 15 districts for the relief works. As at the end of March 1981, a total sum of Rs. 703.90 lakhs has been spent on relief works in scarcity affected areas."

ಅಂದರೆ ಸ್ವಾಮಿ, ಈ ವಿಚಾರಗಳನ್ನು ಹೇಳುತ್ತಾ ಸುಮಾರು ೧೦ ಕೋಟಿ ೯೭ ಲಕ್ಷ ರೂ.ಗಳನ್ನು ರಿಲೀಜ್ ಮಾಡಿದ್ದರೆ ಇವರು ಖರ್ಚು ಮಾಡಿರತಕ್ಕದ್ದು ಎಷ್ಟು ಎಂದರೆ ಕೇವಲ ೭೦ ಲಕ್ಷ ಮಾತ್ರ.

೫-೩೦ ಪಿ.ಎಂ.

ಅಂದರೆ ಸರ್ಕಾರ ಎಷ್ಟರಮಟ್ಟಿಗೆ ಇದರ ಕಡೆ ಗಮನ ಕೊಡಬೇಕಾಗಿತ್ತೋ ಅಷ್ಟರಮಟ್ಟಿಗೆ ಕೊಟ್ಟಿಲ್ಲವೆಂಬುದನ್ನು ಇದು ತೋರಿಸಿಕೊಡುತ್ತದೆ. ಆದರೆ ಮೊನ್ನೆ ಅವರ ಹೇಳಿಕೆಯಲ್ಲಿ ಏನು ಹೇಳಿದ್ದಾರೆಂಬುದನ್ನು ನೋಡಿದರೆ ಅದು ಇನ್ನೂ ಹಾಸ್ಯಾಸ್ಪದವಾಗಿದೆ. ಅಂಥದ್ದರಲ್ಲಿ ಅವರು ಮುಂದೆ ಇದ್ದಾರೆ. ಹೀಗಿರತಕ್ಕ ಪರಿಸ್ಥಿತಿಯಲ್ಲಿ, ಸರ್ಕಾರದವರು ಎಷ್ಟರ ಮಟ್ಟಿಗೆ ತಮ್ಮ ಜವಾಬ್ದಾರಿಯನ್ನು

ನಿರ್ವಹಣೆ ಮಾಡಿದ್ದಾರೆ ಮತ್ತು ನಿರ್ವಹಣೆ ಮಾಡುವುದಕ್ಕೆ ಏತಕ್ಕೆ ಸಾಧ್ಯವಾಗಿಲ್ಲ ಎಂಬ ವಿಷಯಗಳನ್ನು ನಾವು ಪರಿಶೀಲನೆ ಮಾಡಿದ್ದೇ ಆದರೆ ಅವರಿಗೆ ಮಾಡುವುದಕ್ಕೆ ಮನಸ್ಸಿಲ್ಲ ಎಂಬುದು ಇದರಿಂದ ವ್ಯಕ್ತವಾಗುತ್ತದೆ. ಈ ರಾಜ್ಯದಲ್ಲಿ ಬರಗಾಲ ಪದೇ ಪದೇ ಏತಕ್ಕೋಸ್ಕರ ಬರುತ್ತಿದೆ ಎಂಬುದು ಸರ್ಕಾರಕ್ಕೆ ಗೊತ್ತಿದೆ. ತಮಗೆ ಗೊತ್ತಿರುವ ಹಾಗೆ, ಪ್ರತಿ ದಿವಸ, ಪ್ರತಿ ಗಂಟೆಯಲ್ಲಿ ನಮಗಿರತಕ್ಕ ಅರಣ್ಯ ಸಂಪತ್ತನ್ನು ನಾವು ಕಳೆದುಕೊಳ್ಳುತ್ತಿದ್ದೇವೆ ಅರಣ್ಯ ಸಂಪತ್ತು ಏನು ಹಾಳಾಗುತ್ತಿದೆ ಅದನ್ನು ನಿಲ್ಲಿಸುವುದಕ್ಕೆ ನಿರ್ದಿಷ್ಟವಾದ ಕಾರ್ಯಕ್ರಮವನ್ನು ಈ ಸರ್ಕಾರದವರು ತೆಗೆದುಕೊಂಡಿಲ್ಲವೆಂದರೆ ತಪ್ಪಾಗಲಾರದು. ಅರಣ್ಯ ಸಂಪತ್ತು ಯಾವಾಗ ಹೋಗುತ್ತದೆ ಆಗ ಆ ಭೂಮಿ ಬಂಜರು ಭೂಮಿಯಾಗುತ್ತದೆ.

ಶ್ರೀ ಜಿ. ಮಾದೇಗೌಡ.—ಅರಣ್ಯ ಸಂಪತ್ತನ್ನು ಹಾಳಾಗದಂತೆ ತಡೆಗಟ್ಟುವುದಕ್ಕೆ ನಿರ್ದಿಷ್ಟವಾದ ಸಲಹೆ ಮಾಡಿ.

ಶ್ರೀ ಎಂ.ವಿ. ರಾಜಶೇಖರನ್.—ನೀವು ಏನು ಮಾಡುತ್ತೀರಿ, ನಿಮ್ಮ ಚರಿತ್ರೆಯನ್ನು ಹೇಳಿ, ಆ ಮೇಲೆ ನನ್ನ ಸಲಹೆಯನ್ನು ಹೇಳುತ್ತೇನೆ.

ಶ್ರೀ ಜಿ. ಮಾದೇಗೌಡ.—ಚರಿತ್ರೆ ಏನಿದೆ.

ಶ್ರೀ ಎಂ.ವಿ. ರಾಜಶೇಖರನ್.—ನೀವು ಈಗ ಬಂದಿದ್ದೀರಿ; ಕುಳಿತುಕೊಳ್ಳಿ, ಹೇಳುತ್ತೇನೆ.

(ಗೊಂದಲ)

CHAIRMAN.—Sri Rajashekharan, do not address directly to the Minister. I am here to ask the Minister.

SRI M.V. RAJASEKHARN.—Sir, the Hon. Minister said that I am not concerned with it. I would like to know from the Hon. Minister, who is concerned then? He has no business to say like that. He must withdraw those words.

CHAIRMAN.—I am here to ask him. Do not put it as a command. Take it lightly.

ಶ್ರೀ ಎಂ. ವಿ. ರಾಜಶೇಖರನ್.—ನೀವೆಲ್ಲಿ ಇತ್ತೀಚಿಗೆ ಬಂದಿದ್ದೀರಿ, ನಿಮ್ಮ ಮತ್ತು ನಿಮ್ಮ ಸರ್ಕಾರದ ಚರಿತ್ರೆ ಹೇಳುತ್ತೇನೆಂದು ಹೇಳಿದೆ. The Chair must protect my rights.

CHAIRMAN.—I am here to protect your rights. Afterall, you are discussing a very good subject.

ಶ್ರೀ ಜಿ. ಮಾದೇಗೌಡ.—ಅವರು ನಮ್ಮ ಇಲಾಖೆಯ ಬಗ್ಗೆ ಕಳಕಳಿ ವ್ಯಕ್ತಪಡಿಸಿ ಕಾಡನ್ನು ಉಳಿಸ ಬೇಕು ಎಂದರು. Why should he get so much upset? I am equally interested to protect our forests. Let the hon. Member understand that I have also got some right to answer to this House.

CHAIRMAN.—Please forget about it.

SRI M.V. RAJASEKHARAN.—I would like to know, ...

ಶ್ರೀ ಜಿ. ಮಾದೇಗೌಡ.—ಯಾರಾದರೂ ಆಗಲೀ ಅದರ ಬಗ್ಗೆ ನಾನು ಯೋಚನೆ ಮಾಡುವುದಿಲ್ಲ. ಯಾರು ಮಾಡಿದ್ದರೂ ಅದನ್ನು ಈಗ ನಾವು ಸರಿ ಮಾಡಬೇಕು. ಅವರಿಗೆ ಇರುವಷ್ಟೇ ಜವಾಬ್ದಾರಿ ನಮಗೂ ಇದೆ. ಕುಳಿತು ಕೊಳ್ಳಿ ಎಂದು ಕುರಿಗಳಿಗೆ ಹೇಳಿದ ಹಾಗೆ ಮಾತನಾಡಿದರೆ.....

ಶ್ರೀ ಎಂ. ವಿ. ರಾಜಶೇಖರನ್.—ಅವರು ಅದನ್ನು ವೈಯಕ್ತಿಕವಾಗಿ ತೆಗೆದುಕೊಂಡಿದ್ದಾರೆ, ಆದ್ದರಿಂದ, ನಾನು ಅದನ್ನು ಕ್ಲಾರಿಫೈ ಮಾಡುತ್ತೇನೆ.

CHAIRMAN.—Nothing should be recorded, if the hon. Member Sri M.V. Rajasekharan and the Minister speak directly. I am not that incompetent to control this House. If you speak like that, nothing will go on record.

ಶ್ರೀ ಎಂ.ವಿ. ರಾಜಶೇಖರನ್.—ಹಾಗಾದರೆ ಆ ವಿಚಾರದಲ್ಲಿ ಮಾತನಾಡಕೂಡದೆ?

ಛೇರ್ಮನ್.—ಇಲ್ಲ, ಅದಕ್ಕೆ ಅವಕಾಶ ಇಲ್ಲ.

ಶ್ರೀ ಎಂ.ವಿ. ರಾಜಶೇಖರನ್.—ಆಗಬಹುದು. ನಮ್ಮ ರಾಜ್ಯದ ಅರಣ್ಯ ಸಂಪತ್ತು ಹೇಗೆ ನಾಶವಾಗಿ ಹೋಗುತ್ತಿದೆ ಎಂಬುದನ್ನು ಹೇಳುತ್ತಿದ್ದೆ. ಇದು ಒಂದೇ ದಿವಸದಲ್ಲಿ ಆದದ್ದಲ್ಲ, ಬಹಳ ದಿವಸಗಳಿಂದ ನಡೆದುಕೊಂಡು ಬಂದಿದೆ. ಅದನ್ನು ತಡೆಗಟ್ಟುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ. ಈ ಬಗ್ಗೆ ಮಾನ್ಯ ಮಂತ್ರಿಗಳು ಸಲಹೆ ಕೊಡುವಂತೆ ತಿಳಿಸಿದರು, ಅದನ್ನು ಕೊಡುತ್ತೇನೆ. ನಾನು ಸಾಕಷ್ಟು ಸಲಹೆಗಳನ್ನು ಇಟ್ಟುಕೊಂಡಿದ್ದೇನೆ. ಇವತ್ತು ನಮ್ಮಲ್ಲಿರತಕ್ಕ ಭೂಮಿಯ ಪೂರ್ಣ ಲಾಭ ಪಡೆಯಬೇಕಾದರೆ ನಾವು ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಏಕೆಂದರೆ, ಇವತ್ತಿನ ದಿವಸ ಹೊಸ ಹೊಸ ಟೆಕ್ನಾಲಜಿ ನಮ್ಮಲ್ಲಿ ಬಂದಿದೆ. ಅದರ ಪೂರ್ಣ ಲಾಭ ಪಡೆದು ಈಗಿರತಕ್ಕ ಬರಗಾಲದ ಪಿಡುಗನ್ನು ಎಷ್ಟರಮಟ್ಟಿಗೆ ತಪ್ಪಿಸಿಬಹುದೆಂಬುದನ್ನು ಯೋಚಿಸಬೇಕಾಗುತ್ತದೆ. ಈ ದಿಸೆಯಲ್ಲಿ ತಮಗೆ ಗೊತ್ತಿರುವ ಹಾಗೆ ೧೯೭೭-೭೮ರಲ್ಲಿ ಕೆನಡಾದಿಂದ ಒಂದು ಟೀಂ ಬಂದಿದೆ. ಆ ಟೀಮಿನ ವರು ಮುಖ್ಯವಾಗಿ ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಪ್ರವಾಸ ಮಾಡುತ್ತಾ, ನಾವು ಏನು ಮರಗಳನ್ನು ಕಡಿಯುತ್ತಿದ್ದೆವೋ ಅದನ್ನು ನೋಡಿ. ಈ ಭಾಗದಲ್ಲಿ ಆದಷ್ಟು ಜಾಗ್ರತೆ ಬರಗಾಲ ಪರಿಸ್ಥಿತಿ ಬರುತ್ತದೆ. ಎಂದು ಹೇಳಿದರಲ್ಲದೆ ಈ ವಿಚಾರದಲ್ಲಿ ಎಚ್ಚರಿಕೆ ವಹಿಸಬೇಕೆಂದು. ಅವರು ಹೇಳಿದ ೧೫ ವರ್ಷಗಳ ತರುವಾಯ ಆ ಪರಿಸ್ಥಿತಿಯನ್ನು ನಾವು ಕಣ್ಣಾರೆ ಕಾಣುತ್ತಿದ್ದೇವೆ. ಈಗ ಆಳುತ್ತಿರುವವರು ನಮ್ಮವರು, ಆಗ ಆಳುತ್ತಿದ್ದವರು ಬೇರೆಯವರು. There was a Famine Commission constituted by the then British Government. They have given a beautiful report. I request both the Hon. Minister for Forest and the Hon. Minister for Revenue to go through it. They have listed out all the measures which have to be taken. The drought has not come sudden just because this Minister has come.

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ಮೈಸೂರು ಫ್ಯಾಮೈನ್ ಕೋಡ್ ೧೯೦೬ ರದ್ದು. ಅದರ ಪ್ರಕಾರ ಹೋಗಿದ್ದರೆ ಎಲ್ಲಾದರೂ ಕೆಲಸ ತೆಗೆದುಕೊಳ್ಳಬೇಕಾಗಿತ್ತು, ಆದರೆ ಈಗ ಒಂದನ್ನೂ ತೆಗೆದು ಕೊಳ್ಳುವುದಕ್ಕೆ ಬರುವುದಿಲ್ಲ.

ಶ್ರೀ ಎಂ.ವಿ. ರಾಜಶೇಖರನ್ —ಮಾನ್ಯ ಮಂತ್ರಿಗಳು ಅದನ್ನು ಮೇಲ್ಮನೆಯಲ್ಲಿ ಕೂಡ ಪ್ರಸ್ತಾಪ ಮಾಡಿದ್ದಾರೆ. ಅದನ್ನು ಬದಲಾವಣೆ ಮಾಡತಕ್ಕವರು ಯಾರು.

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ನಾವೇ ಮಾಡಬೇಕಾಗಿದೆ.

SRI M.V. RAJASEKHARAN.—I have gone through that Report. I am not blind to the good suggestions and actions which the present Government has initiated ೧೯೦೬ರಲ್ಲಿ ಮಾಡಿರುವ ಫ್ಯಾಮೈನ್ ಕೋಡ್ ಪ್ರಕಾರ ಕೆಲಸ ಮಾಡುವುದಕ್ಕಾಗುವುದಿಲ್ಲವೆಂಬುದು ಬೇರೇವಿಚಾರ. ಅದಕ್ಕೋಸ್ಕರವೇ ಅದನ್ನು ಬದಲಾವಣೆ ಮಾಡಬೇಕೆಂದು ಹೇಳುತ್ತಿರುವುದು. ಅದನ್ನು ದಯವಿಟ್ಟು ಬದಲಾವಣೆ ಮಾಡಿ.

MR. CHAIRMAN.—The Hon'ble Minister was talking of Mysore Famine Code. I would like to know as to whether he knows about the Madras Famine Code.

SRI MALLIKARJUNA KHARGE.—At present we have 4 codes. Madras Famine Code, Hyderabad Code, Bombay Presidency Code, and

the Old Mysore Code. At present, we are following the Mysore Famine Code which is extended to the entire State. But according to those ingredients, no area will come under famine...

ಶ್ರೀ ಎಂ. ವಿ. ರಾಜಶೇಖರನ್. ಅಲ್ಲ ಸ್ವಾಮಿ, ಆದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಪುನಃ ಇದರ ಬಗ್ಗೆ ಪರಿಶೀಲನೆ ಮಾಡಿದರೆ ಏನೂ ತೊಂದರೆಯಾಗುವುದಿಲ್ಲ. ಪರದೇಶೀಯರು ನಮ್ಮ ರಾಷ್ಟ್ರದಲ್ಲಿ ಆಡಳಿತ ನಡೆಸುತ್ತಿರುವಾಗ ಮಾಡಿದ ವಿಚಾರ ಇದು. ಆಗ ಜನಗಳ ಕಷ್ಟಪರಿಸ್ಥಿತಿ ಏನು ಎಂಬುದು ಅವರಿಗೆ ಗೊತ್ತಿರಲಿಲ್ಲ ಈಗ ನಮ್ಮ ಜನರೇ ಹಳ್ಳಿಗಾಡಿನಿಂದ ಚುನಾಯಿತರಾಗಿ ರಾಜ್ಯದ ಆಡಳಿತ ಸೂತ್ರವನ್ನು ವಹಿಸಿಕೊಂಡಿರುವಾಗ ಅವರು ಹಿಂದೆ ಮಾಡಿದ್ದನ್ನು ಬದಲಾವಣೆ ಮಾಡಬೇಕಾಗುತ್ತದೆ. ಮಾನ್ಯ ಮಂತ್ರಿಗಳು ಹೇಳುವುದನ್ನು ಸ್ವಾಗತಿಸುತ್ತೇನೆ. ನಾವು ನೀವು ವಿಮರ್ಶೆ ಮಾಡಿ ಆ ಬಗ್ಗೆ ತೀರ್ಮಾನ ಮಾಡೋಣ. ಅದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಈಗಿನ ಪರಿಸ್ಥಿತಿ ಬದಲಾವಣೆಯಾಗಿದೆ. ಕಾಲಕಾಲಕ್ಕೆ ಸರಿಯಾದಂಥ ಸೂಕ್ತವಾದಂಥ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇ ಆಗಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ. ನಾನು ಟೆಕ್ನಾಲಜಿ ವಿಚಾರದಲ್ಲಿ ಹೇಳುತ್ತಿದ್ದೆ. ಟೆಕ್ನಾಲಜಿ ಎಲ್ಲಿಯವರೆಗೆ ಬೆಳೆದಿದೆ ಎಂದರೆ ನಮ್ಮ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿರತಕ್ಕ ಜಿಯಾಲಜಿ ಡಿಪಾರ್ಟ್‌ಮೆಂಟಿನವರು ಸೆಟಲೈಟ್ ತೆಗೆದುಕೊಂಡಿರುವ ಫೋಟೋಗ್ರಾಫ್‌ಗಳನ್ನು ತೆಗೆದುಕೊಂಡು ಅಧ್ಯಯನ ಮಾಡಿದ್ದಾರೆ. ಇವತ್ತಿನ ದಿವಸ ಸೆಟಲೈಟ್ ಮೂಲಕ ಇಡೀ ಪ್ರಪಂಚದ ಎಲ್ಲ ರಾಷ್ಟ್ರಗಳ ಫೋಟೋಗಳನ್ನು ತೆಗೆಯಬಹುದು. ರಷ್ಯಾ ದೇಶದಲ್ಲಿ ಹೋದವರ್ಷ ಗೋಧಿ ಬೆಳೆ ಆಗುವುದಿಲ್ಲ ಎಂದು ಒಂದು ವರ್ಷದ ಹಿಂದೆ ಅಮೆರಿಕಾ ದೇಶಕ್ಕೆ ಗೊತ್ತಿತ್ತು. ರಷ್ಯಾದಲ್ಲಿ ಬಿತ್ತನೆ ಎಷ್ಟರಮಟ್ಟಿಗೆ ಆಗಿದೆ, ಫಲ ಎಷ್ಟರಮಟ್ಟಿಗೆ ಆಗುತ್ತದೆ ಎಂಬ ಬಗ್ಗೆ ಸೆಟಲೈಟ್‌ನಿಂದ ತೆಗೆದುಕೊಂಡಿರುವ ಚಿತ್ರ ಅವರಲ್ಲಿತ್ತು. ಅದನ್ನು ಮ್ಯಾಗ್ನಿಫೈಡ್ ಮಾಡಿ... ಅದು ಎಲ್ಲಿಯವರೆಗೆ ವಿವರಗಳನ್ನು ಹೇಳುತ್ತದೆಂದರೆ ಸೆಟಲೈಟ್ ತೆಗೆದುಕೊಂಡಿರುವ ಚಿತ್ರದಲ್ಲಿ ನನಗೆ ಎರಡು ಎಕರೆ ಜಮೀನಿದ್ದು, ಮನೆ ಇದ್ದು ನಾನು ಕೆಲಸ ಮಾಡುತ್ತಿದ್ದರೆ ಅದನ್ನು ಕೂಡ ತಿಳಿದುಕೊಳ್ಳಬಹುದು ನೂರಾರು ಮೈಲಿ ಎತ್ತರದಿಂದ ಈ ಚಿತ್ರವನ್ನು ತೆಗೆದುಕೊಂಡಿರುತ್ತಾರೆ. ಆ ಚಿತ್ರಗಳ ಮೂಲಕ ಇನ್‌ಫ್ರಾ ರೆಡ್ ಮತ್ತು ಪಯಲೆಟ್ ರೆಡ್ ರೇಸ್ ಉಪಯೋಗಿಸಿ ನಮ್ಮ ರಾಜ್ಯದ ಚಿತ್ರವನ್ನು ಸಹ ಅವರು ಪಡೆದಿದ್ದಾರೆ. ಜಿಯಾಲಜಿ ಡಿಪಾರ್ಟ್‌ಮೆಂಟಿನವರು ಅದರ ಮೂಲಕ ಪರಿಶೀಲನೆ ಮಾಡಿ ಕೆಲವೊಂದು ವಿಚಾರವನ್ನು ಎತ್ತಿಹೇಳಿದ್ದಾರೆ. ಆ ವರದಿ ನನ್ನ ಹತ್ತಿರ ಇಲ್ಲ. ಅದನ್ನು ತರಿಸಿಕೊಳ್ಳಿ ಎಂದು ಸಲಹೆ ಮಾಡುತ್ತೇನೆ. ಅವರು ಹೇಳಿರುವಹಾಗೆ ಸುಮಾರು ೫೦೦–೬೦೦ ಅಡಿ ಆಳದಲ್ಲಿ ಸಾಕಷ್ಟು ಗ್ರೌಂಡ್‌ವಾಟರ್ ರಿಸರ್ವಾಯರ್ ಅನುಕೂಲತೆ ಇದೆ. ಇದನ್ನು ಹೇಗೆ ಗುರುತು ಮಾಡಿದ್ದಾರೆಂದರೆ ultra violet Rays and Infra-Red Rays ಬಿಟ್ಟು they have recognised major fracture. Breaking zone ಏನು ಬರುತ್ತದೆಂಬುದನ್ನು ಗುರುತು ಮಾಡಿದ್ದಾರೆ, ಆ ಜೋನ್ ಇಲ್ಲಿಂದ ಎಲ್ಲಿಗೆ ಹೋಗುತ್ತದೆಂದರೆ it is running from east to west. —ಈ drought prone area—ಜಿಲ್ಲೆ ಪ್ಲೇಟೋನಲ್ಲಿದೆ. ಇಡೀ ಧಕ್ಷಣ ಭಾರತ ಪ್ಲೇಟೋನಲ್ಲಿದೆ. ನಮ್ಮ ರಾಜ್ಯದ ಹಲವಾರು ಜಿಲ್ಲೆಗಳು ಪ್ಲೇಟೋನಲ್ಲಿ ಇರುವುದರಿಂದ ಆಂಡರ್‌ಗ್ರೌಂಡ್ ವಾಟರ್ ತೆಗೆದುಕೊಳ್ಳಬೇಕಾದರೆ ಸುಮಾರು ೪೦೦–೫೦೦–೬೦೦ ಅಡಿಗಳ ಆಳಕ್ಕೆ ಹೋಗಬೇಕಾಗುತ್ತದೆ. ಆಂಧ್ರದ ಚಿತ್ತೂರಿನಲ್ಲಿ, ನಾರ್ತ್ ಆರ್ಕಾಟ್ ಜಿಲ್ಲೆಯಲ್ಲಿ ಹೋದರೆ ೧೦೦ ರಿಂದ ೧೨೦ ಅಡಿಯೊಳಗೇ ನೀರು ಸಿಗುತ್ತದೆ. ದುರ್ದೈವ ನಾವು ಎತ್ತರದಲ್ಲಿರುವುದರಿಂದ ೬೦೦ ಅಡಿ ಆಳಕ್ಕೆ ಹೋದರೆ ನಮಗೆ ಸಾಕಷ್ಟು ನೀರು ಸಿಗುತ್ತದೆ. ನಮ್ಮ ರಾಜ್ಯದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಏನು ನೀರು ಹರಿಯುತ್ತಿದೆ ಇದು ನಮ್ಮ ರಾಜ್ಯದ ಆಂಡರ್‌ಗ್ರೌಂಡಿನಲ್ಲಿ ಹರಿದು ಬೇರೆ ರಾಜ್ಯಕ್ಕೆ ಹೋಗುತ್ತಿದೆ. ಇದನ್ನು ಬ್ರೇಕ್ ಮಾಡಿದ್ದೇ ಆದರೆ ಸಾಕಷ್ಟು ನೀರಿನ ಅನುಕೂಲ ಪಡೆದು ಬರಗಾಲಪೀಡಿತ ಪ್ರದೇಶಗಳಲ್ಲಿ ಮುಂದೆ ಬರ ಬರದೇ ಇರುವಹಾಗೆ ಯಾವ ಯಾವ ಕಾರ್ಯಕ್ರಮಗಳನ್ನು ನಾವು ತೆಗೆದುಕೊಳ್ಳಬೇಕೋ ಆದನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

ಇನ್ನು ಅಪೋರ್‌ಸ್ಪೇಷನ್ ಬಗ್ಗೆ ಹೇಳಬೇಕೆಂದರೆ...

SRI M C. BASAPPA.—My only point is that whether he has exhausted the running water...

SRI M. V. RAJASHEKARAN.—I have got enough resorvoir. Don't worry about it.

CHAIRMAN.—I come from a perennial district. Otherwise, I would have enjoyed your speech.

SRI M V. RAJASHEKARAN.—The point raised by me and the hon'ble member Sri M. C Basappa is one and the same. It coincides. So, sir, the yield has to be taken in to consideration. ಇವತ್ತು ಈ ಲೆವೆಲ್‌ನಲ್ಲಿ ನಾವು ಏನು ಟ್ಯಾಪ್ ಮಾಡುತ್ತೇವೆ ಇಲ್ಲಿ ಸಾಕಷ್ಟು ಹೆಚ್ಚಿಗೆ ನೀರಿನ ಯೀಲ್ಡ್ ಬರುತ್ತದೆಂದು ಜಿಯಾಲಜಿಸ್ಟ್ ಮನಸ್ಸಿನಲ್ಲಿ ಬಂದಿದೆ. ಆದರೆ ಅದನ್ನು ಟೆಸ್ಟ್ ಮಾಡುವುದಕ್ಕೆ ಒಂದೆರಡು ಕಡೆ ಸರ್ಕಾರದವರು ಅಲೋ ಮಾಡಬೇಕಾಗುತ್ತದೆ. ೫೦೦–೬೦೦ ಅಡಿಗಳಲ್ಲಿ ಈ ನೀರನ್ನು ಟ್ಯಾಪ್ ಮಾಡಿ ಎಷ್ಟರ ಮಟ್ಟಿಗೆ ಇದರ ಉಪಯೋಗವನ್ನು ಪಡೆದು ಅಭಾವಪೀಡಿತಪ್ರದೇಶಗಳಿಗೆ ಕೊಡಬಹುದು ಎಂಬುದನ್ನು ನೋಡಬಹುದು. ಈಗ ನಾವು ಇದಕ್ಕೆ ನೂರಾರು ಕೋಟಿ ರೂಪಾಯಿಗಳನ್ನು ವ್ಯಯ ಮಾಡುತ್ತಿದ್ದೇವೆ. ಮಾನ್ಯ ಮಂತ್ರಿಗಳು ೨೦೫ ಕೋಟಿ ರೂಪಾಯಿಗಳನ್ನು ಕೇಂದ್ರಸರ್ಕಾರಕ್ಕೆ ಕೊಡಬೇಕೆಂದು ಹೇಳಿದ್ದಾರೆ. ಅದರಲ್ಲಿ ೫ ಕೋಟಿ ರೂಪಾಯಿಗಳನ್ನು ಇದಕ್ಕೆ ತೆಗೆದಿಡಿ. Let them experiment. They have got their own Geology Department. They have got the department in the University. Let them also take the support of the Indian Institnte of Science. The Hon'ble Minister for Revenue has quoted that he has taken the assistance of the Indian Institute of Science in solving the problem of handpumps. I would suggest that let him not only take the assistance of the Indian Institute of Science but also get all relevant information available in the whole country. Even if he spends 5 crores it is going to be one of the most useful and utility factors. ಆದ್ದರಿಂದ ಈ ಬಗ್ಗೆ ನಿರ್ಲಕ್ಷ್ಯ ಮಾಡುವುದು ಬೇಡ. ಈ ಪ್ರಯೋಗದಲ್ಲಿ ಯಶಸ್ಸನ್ನು ಸಾಧಿಸಿದರೆ ನಿಜವಾಗಿ ಈ ಭಾರದ ಜನಗಳಿಗೆ ಸಾಕಷ್ಟು ನೀರಿನ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಇವತ್ತಿನ ದಿವಸ ತಮಗೆ ಗೊತ್ತಿರುವಹಾಗೆ again the utilisation of water, there has been a technology revolution. ಮಾನ್ಯ ಮಂತ್ರಿಗಳಿಗೆ ಗೊತ್ತಿದೆ ಎಂದು ಕಾಣುತ್ತದೆ, ಇಸ್ರೇಲಿನಲ್ಲಿ ಡ್ರಿಪ್ ಇರಿಗೇಷನ್ ಸಿಸ್ಟಂನಲ್ಲಿ ಯಾವರೀತಿ ನೀರಿನ ಅನುಕೂಲವನ್ನು ಪಡೆದಿದ್ದಾರೆ ಎಂಬುದರ ಬಗ್ಗೆ. ಮೂರು ದಿವಸಗಳ ಹಿಂದೆ ಈ ವಿಚಾರವನ್ನು ನಾನು ಒಬ್ಬ ಎಕ್ಸ್‌ಪರ್ಟ್ ಹತ್ತಿರ ಮಾತನಾಡುತ್ತಿದ್ದೆ. ಈಗಿರತಕ್ಕ ನೀರಿನಲ್ಲಿ ಒಂದು ಎಕರೆಗೆ ನೀರಾವರಿ ಮಾಡುವ ಅವಕಾಶವಿದ್ದರೆ under drip irrigation system you can go in for 10 acres of irrigation. That is 1 : 10.

(*Mr. Deputy Speaker in the Chair*)

There has been a great revolution in the water technology utilisation in the world and Israel is a living example. If the hon. Minister wants, I have got slides. I can screen them. There is a through revolutionary change. Why not we use that and take advantage of that ? ಡ್ರಿಪ್ ನೀರಾವರಿ ಪದ್ಧತಿಯನ್ನು ಉಪಯೋಗಿಸಿಕೊಂಡು ಆ ಭಾಗದಲ್ಲಿ ಕಾಡನ್ನು ಬೆಳಸಿದ್ದೇ ಆದರೆ ಅದರಿಂದ ಸಾಕಷ್ಟು ತೇವಾಂಶವನ್ನು ಹಿಡಿದು ನಿಲ್ಲಿಸಿದಂತಾಗುತ್ತದೆ. ಅಂತರ್ಜಲದ ಮಟ್ಟ ಮೇಲೆ ಬರುತ್ತದೆ. ಮರಗಳನ್ನು ಕಡಿಯುವುದರಿಂದುಂಟಾಗುವ ಹಾನಿಯನ್ನು ನಾನು ಮಾನ್ಯ ಅರಣ್ಯ ಸಚಿವರಿಗೆ ತಿಳಿಸಬಯಸುತ್ತೇನೆ. ಮಾನ್ಯ ಅರಣ್ಯ ಸಚಿವರ ಜಿಲ್ಲೆಯು ಕೆಲವು ಭಾಗ ಬಿಟ್ಟರೆ ಉಳಿದ ಭಾಗ ಸಾಕಷ್ಟು ನೀರಾವರಿಯಿಂದ ಕೂಡಿದ ಪ್ರದೇಶವಾಗಿದೆ. ಅವರಿಗೆ ಮರಗಳನ್ನು ಕಡಿಯುವುದರಿಂದುಂಟಾಗುವ ಕಷ್ಟ ಗೊತ್ತಿಲ್ಲ. ಮರಗಳಿಲ್ಲದೆ ಗಾಳಿ ಬೀಸುವುದಿಲ್ಲ. ಬೀಸಿದ ಅಲ್ಪಸ್ವಲ್ಪ

ಗಾಳಿ ಇದ್ದಬದ್ದ ತೇವಾಂಶವನ್ನು ಪೂರ್ತಿಯಾಗಿ ಹೋಗಲಾಡಿಸಿಬಿಡುತ್ತದೆ. ಬಿಸಿಲಿನ ಝಳ ಬೇಕು. ಆವಿಯಾಗುವಿಕೆ ಮತ್ತಿತರ ಅನೇಕ ಕಾರಣಗಳಿಂದ ಐವತ್ತು ಅಡಿ ಆಳದಲ್ಲಿ ಸಿಗುತ್ತಿದ್ದ ಅಂತರ್ಜಲಕ್ಕೆ ಇಂದು ನೂರೈವತ್ತು ಅಡಿಯಷ್ಟು ಆಳಕ್ಕೆ ಹೋಗಬೇಕಾಗಿದೆ. I am not a technical man but I have come to know...ಎಲ್ಲಿ ಮರಗಳಲ್ಲಿ ಅಲ್ಲಿ ನೀರಿನ ಆವಿ ಅತ್ಯಂತ ವೇಗದಲ್ಲಾಗುತ್ತದೆ. ಮತ್ತು ಆದರಿಂದ ಎಲ್ಲ ರೀತಿಯ ಕಷ್ಟನಷ್ಟಗಳುಂಟಾಗುತ್ತವೆ. ಆದುದರಿಂದ. ಡ್ರಿಪ್ ನೀರಾವರಿ ಪದ್ಧತಿಯನ್ನು ಉಪಯೋಗಿಸಿಕೊಂಡು ಕಾಡನ್ನು ಬೆಳಸಿದ್ದೇ ಆದರೆ ಆ ಭಾಗದಲ್ಲಿ ಮರಗಳು ಬೆಳೆದು ನೀರು ಆವಿಯಾಗುವುದು ನಿಲ್ಲುತ್ತದೆ. ಇದರ ಜೊತೆಗೆ ಮಳೆ ಕೂಡ ಚೆನ್ನಾಗಿ ಬರುತ್ತದೆ.

ಈಗ ನಾನು ಕನಕಪುರ ತಾಲೂಕಿನ ವಿಚಾರಕ್ಕೆ ಬರುತ್ತೇನೆ. ೧೫-೨೦ ವರ್ಷಗಳ ಹಿಂದೆ ಅಲ್ಲಿ ಆಗುತ್ತಿದ್ದ ಮಳೆ ಈ ದಿವಸ ಆಗುತ್ತಿಲ್ಲ. ಹದಿನೈದು ವರ್ಷಗಳ ಹಿಂದೆ ಮಳೆಗಾಲದ ಸಮಯದಲ್ಲಿ ಬೆಂಗಳೂರಿನಲ್ಲಿ ಹೊರಗಡೆ ಹೋಗುವುದಕ್ಕಾಗದಷ್ಟು ಮನೆ ಬೀಳುತ್ತಿರುತ್ತಿತ್ತು. ಇವತ್ತಿನ ಪರಿಸ್ಥಿತಿ ಏನಿದೆ? Because we have out down every possible tree, the whole environment is being changed and we do not know what is going to happen. ಆದುದರಿಂದ, ರಾಜ್ಯದಲ್ಲಿ ಎಲ್ಲೆಲ್ಲಿ ಹೆಚ್ಚಿಗೆ ನೀರು ಸಿಗುತ್ತದೆನ್ನುವುದನ್ನು ನೋಡಿ ಅಲ್ಲೆಲ್ಲ ಆದನ್ನು ಟ್ಯಾಪ್ ಮಾಡುವುದಕ್ಕೆ ಎಲ್ಲ ಪ್ರಯತ್ನಗಳನ್ನೂ ಮಾಡಬೇಕೆಂದು ನಾನು ಸರ್ಕಾರಕ್ಕೆ ಸಲಹೆ ಮಾಡಬಯಸುತ್ತೇನೆ.

ಇವತ್ತಿನ ದಿವಸ ಸಾಕಷ್ಟು ಜನರು ಕಷ್ಟದಲ್ಲಿದ್ದಾರೆ. ನಾನು ಮೊದಲೆ ಹೇಳಿದ ಹಾಗೆ, ಆರ್ಮ್ಯಗಂ ಸಮಿತಿ ಸಲ್ಲಿಸಿರುವ ವರದಿಯಲ್ಲಿ ಬಹಳ ಉತ್ತಮವಾದ ಸಲಹೆಗಳಿವೆ. ಅವುಗಳನ್ನು ಪರಿಶೀಲನೆ ಮಾಡಿ ಕಾರ್ಯರೂಪಕ್ಕೆ ತಂದದ್ದೇ ಆದರೆ ಬರಗಾಲಪೀಡಿತ ಪ್ರದೇಶಗಳ ಬಹುಭಾಗ ಅನಾನುಕೂಲಗಳು ಅನುಕೂಲಗಳಾಗಿ ಪರಿಣಮಿಸಬಹುದು. ಆದುದರಿಂದ, ಅದನ್ನು ಮಾಡಬೇಕೆಂದು ಸರ್ಕಾರವನ್ನು ಕೋರುತ್ತೇನೆ.

ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರು ಆ ಸದನದಲ್ಲಿ ಮಾತನಾಡುತ್ತಾ ಬರಗಾಲ ಪೀಡಿತ ಪ್ರದೇಶಗಳಲ್ಲಿ ಕುಡಿಯುವ ನೀರಿನ ಅಭಾವ ಎಷ್ಟರಮಟ್ಟಿಗಿದೆ ಎಂದು ಹೇಳಿದ್ದಾರೆ. ಅಲ್ಲದೆ, ನಮ್ಮಲ್ಲಿ ೫೫ ಕೊರೆಯುವ ಯಂತ್ರಗಳಿವೆ; ಇನ್ನೂ ೫೮ ಯಂತ್ರಗಳನ್ನು ತರಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ; ನಾಲ್ಕು ಕೊರೆಯುವ ಯಂತ್ರಗಳು ಯುನಿಸೆಫ್‌ನಿಂದ ಬಂದಿವೆ ಮತ್ತು ಇನ್ನೂ ನಾಲ್ಕು ಯಂತ್ರಗಳು ಡೆನಿಡಾದಿಂದ.....

ಶ್ರೀ ಬೇಗಾನೆ ರಾಮಯ್ಯ.—ಯುನಿಸೆಫ್‌ನ ನಾಲ್ಕು ಕೊರೆಯುವ ಯಂತ್ರಗಳಲ್ಲಿ ಈಗಾಗಲೇ ಎರಡು ಬಂದಿದ್ದು ಅವುಗಳು ಸುಮಾರು ೧೫೦೦ ಅಡಿ ಆಳಕ್ಕೆ ಕೊರೆಯುವ ಸಾಮರ್ಥ್ಯ ಹೊಂದಿವೆ. ಮೊದಲು ಕರ್ನಾಟಕದಲ್ಲಿ ಇಂಥಾ ಯಂತ್ರಗಳಿರಲಿಲ್ಲ. ಇವೇ ಪ್ರಥಮವಾಗಿ ಬಂದಿರುವುವು. ನಮ್ಮ ಬಳಿ ಇದ್ದ ಯಂತ್ರಗಳು ಕೇವಲ ೬೦೦-೭೦೦ ಅಡಿ ಆಳಕ್ಕೆ ಮಾತ್ರ ಕೊರೆಯುತ್ತಿದ್ದವು. ಎರಡು ಯಂತ್ರಗಳಲ್ಲಿ ಈಗಾಗಲೇ ಒಂದು ಬೀದರ್‌ಗೆ ಹೋಗಿದೆ; ಮತ್ತೊಂದು ಇಲ್ಲೇ ಇದೆ. ಬೇಕಾದರೆ ಆದನ್ನು ತಮಗೆ ತೋರಿಸುತ್ತೇನೆ. ಇನ್ನೂ ಎರಡು ಯಂತ್ರಗಳು ಬರತಕ್ಕ ಹಾದಿಯಲ್ಲಿವೆ. ಡೆನಿಡಾದಿಂದ ಐದು ಯಂತ್ರಗಳು ಬರುತ್ತವೆ. ಇವುಗಳನ್ನೆಲ್ಲ ಅವರು ನಮಗೆ ಉಡುಗೊರೆಯಾಗಿ ಕೊಟ್ಟಿದ್ದಾರೆ. ಇವುಗಳ ಜೊತೆಗೆ ಸುಮಾರು ಐದು ಲಕ್ಷ ರೂಪಾಯಿ ಬೆಲೆ ಬಾಳುವ ಬಿಡಿ ಭಾಗಗಳನ್ನೂ ಕೊಟ್ಟಿದ್ದಾರೆ.

ಶ್ರೀ ಎಂ. ವಿ. ರಾಜಶೇಖರನ್.—ಈಗ ನಮ್ಮ ರಾಜ್ಯದಲ್ಲಿರುವ ೫೫ ಕೊರೆಯುವ ಯಂತ್ರಗಳಲ್ಲಿ ೩೬ ಯಂತ್ರಗಳು ನಮ್ಮ ಸರ್ಕಾರದ ಯಂತ್ರಗಳೆಂದು ಮಾನ್ಯ ಸಚಿವರು ಹೇಳಿದ್ದಾರೆ. ಈ ೫೫ ಯಂತ್ರಗಳಲ್ಲಿ ಎಷ್ಟು ಸಿಕ್ ಲಿಸ್ಟ್‌ನಲ್ಲಿವೆ ಮತ್ತು ಬಿಡಿಭಾಗಗಳಿಲ್ಲದೆ ನಿಂತಿವೆ ಎಂಬುದನ್ನು ನಾವು ತಿಳಿದುಕೊಳ್ಳಬೇಕಾಗಿದೆ.

ಶ್ರೀ ಬೇಗಾನೆ ರಾಮಯ್ಯ.—ನನ್ನ ಇಲಾಖೆಗೆ ಸಂಬಂಧಿಸಿದ ಬೇಡಿಕೆ ಮೇಲಣ ಚರ್ಚೆ ಸಮಯದಲ್ಲಿ ನಾನು ಸುಮಾರು ಒಂದೂವರೆ ಗಂಟೆಗಳ ಕಾಲ ಉತ್ತರ ನೀಡಿದ್ದೇನೆ. ಆದರಲ್ಲಿ ಸುಮಾರು ಒಂದು ಗಂಟೆಯನ್ನು ಕುಡಿಯುವ ನೀರಿನ ಬಗ್ಗೆ ಮಾತನಾಡಿದ್ದೇನೆ. ಕೊರೆಯುವ ಯಂತ್ರಗಳಿಗೆ ಬಿಡಿಭಾಗಗಳಿಲ್ಲದಿದ್ದರೆ ಮೊದಲು ವೆಲ್ ಬೋರಿಂಗ್ ವಿಭಾಗಕ್ಕೇ ಬರಬೇಕಾಗಿತ್ತು. ಇಂಥಾ ಎರಡು ವಿಭಾಗಗಳು ಬೆಂಗಳೂರು ಮತ್ತು ಗುಲ್ಬರ್ಗದಲ್ಲಿ ಮಾತ್ರ ಇದ್ದವು. ಈಗ ಒಂದು ಸುಸಜ್ಜಿತ ವ್ಯವಸ್ಥೆ ಮಾಡಿ ಎಲ್ಲಿ ಯಂತ್ರಗಳು

ಕೆಟ್ಟುಹೋಗುವವೋ ಅಲ್ಲಿಗೇ ಹೋಗಿ ಅವುಗಳನ್ನು ದುರಸ್ತು ಮಾಡುವ ಹಾಗೆ ಕ್ರಮ ತೆಗೆದುಕೊಂಡಿದ್ದೇವೆ. ಮೊದಲು ಜಿಲ್ಲೆಗೊಂದರಂತೆ ಸಂಚಾರಿ ಘಟಕಗಳಿದ್ದವು. ಈಗ ಜಿಲ್ಲೆಗೆರಡರಂತೆ ಮಾಡಿದ್ದೇವೆ. ಹೀಗೆ ನಾವು ಸುಸಜ್ಜಿತ ರೀತಿಯಲ್ಲಿ ಕೆಲಸ ಮಾಡುವ ಹಾದಿಯಲ್ಲಿದ್ದೇವೆ ನನ್ನ ಒಂದೂವರೆ ವರ್ಷದ ಅನುಭವದಲ್ಲಿ ಹೇಳುವುದಾದರೆ, ಇದರ ಬಗ್ಗೆ ನಾವು ಬೆಚ್ಚಿನ ಗಮನಕೊಡುತ್ತಿರುವುದು ತಮಗೆಲ್ಲ ಗೊತ್ತಿದೆ. ಈಗ ಬರಗಾಲದ ಪ್ರಶ್ನೆ ಬಂದಿದೆ. ಇದರ ಬಗ್ಗೆ ನಾವು ಗಮನ ಕೊಡಬೇಕಾಗಿದೆ ನಮ್ಮಲ್ಲೀಗ ೫೩ ಕೊರೆಯುವ ಯಂತ್ರಗಳಿವೆ ಕಳೆದ ವರ್ಷ ನಮ್ಮಲ್ಲಿ ಇಂಥಾ ನೂರು ಯಂತ್ರಗಳಿದ್ದವು. ನೆರೆಯ ಮದರಾಸು ಮತ್ತು ಮಹಾರಾಷ್ಟ್ರ ರಾಜ್ಯಗಳಿಂದ ನಮಗೆ ಹೆಚ್ಚು ಯಂತ್ರಗಳು ಬಂದಿದ್ದವು. ಆದರೆ, ಅಲ್ಲೂ ಬರಗಾಲದ ಪ್ರಶ್ನೆ ಬಂದಾಗ, ಯಂತ್ರಗಳು ಎಲ್ಲಿದ್ದರೂ ಬರಬೇಕೆಂದೂ ಇಲ್ಲದಿದ್ದರೆ ಅವುಗಳ ರಿಜಿಸ್ಟ್ರೇಷನ್ ರದ್ದುಪಡಿಸಲಾಗುವುದೆಂದು ಆ ರಾಜ್ಯದವರು ಹೇಳಿದಾಗ ಅವು ಅಲ್ಲಿಂದಲೇ ವಾಪಸ್ಸು ಹೋಗಿವೆ. ಈಗ ಮತ್ತೆ ಬರಲಿಕ್ಕೆ ಪ್ರಾರಂಭವಾಗಿವೆ ; ಬಂದಂತೆಲ್ಲ ಕಳುಹಿಸುತ್ತಿದ್ದೇವೆ.

MR. DEPUTY SPEAKER.—You can continue tomorrow. I have an announcement to make.

ANNOUNCEMENT

I have receied a letter from the hon. Member Sri R.S. Patil stating that he has joined the Congress (I) Party and the Secretary, Congress (I) Legislatue Party has also intimated that Sri R. S. Patil has been admitted to the Congress I Legislature Party. Seating arrangements will be made accordingly.

SRI M. V. RAJASEKHARAN.—Shame ! Shame !!.

MR. DEPUTY SPEAKER.—The House now stands adjourned to meet again at 9-00 A.M. tomorrow.

(The House adjourned at Fifty Nine minutes past Five of the Clock to meet again at Nine of the Clock on Friday, the 31st July, 1981.)